# ಕರ್ನಾಟಕ ಸರ್ಕಾರ
## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.
## ಸಿ.ಸಿ.ನಂ.884/2014

**ಪಿ.ಡಬ್ಲ್ಯೂ: 22**

**ಸಿ.ಡಬ್ಲ್ಯೂ: 23**

ಸಾಕ್ಷಿದಾರರ **ಹೆಸರು** : ಹರೀಶ

ತಂದೆಯ **ಹೆಸರು** : ರಾಮಯ್ಯ

**ವಯಸ್ಸು** : **31 ವರ್ಷ**

**ಉದ್ಯೋಗ** : ಆಪರೇಟರ್

**ವಾಸಸ್ಥಳ** : ದೊಡ್ಡ ಕುಂದೂರು

**ದಿನಾಂಕ: 01-12-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

ಅಕ್ಟೋಬರ್ **2013** ರಲ್ಲಿ ನಾನು ಲಕ್ಕವಳ್ಳಿ ಪೋಲೀಸ್ ಠಾಣೆಗೆ ಬೇರೆ ಕೆಲಸಕ್ಕೆ ಹೋದಾಗ ಪೋಲೀಸರು ನನ್ನ ಸಹಿ ಪಡೆದಿರುತ್ತಾರೆ. ಪ್ರಕರಣದ ಬಗ್ಗೆ ಪೋಲೀಸರು ಬಾವಿಕೆರೆಯ ಕಾವೇರಿ ಗ್ರಾಮೀಣ ಬ್ಯಾಂಕಿನಲ್ಲಿ ದುಡ್ಡಿನ ದುರುಪಯೋಗವನ್ನು ಬ್ಯಾಂಕ್ ಮ್ಯಾನೇಜರ್ ರವರು ಮಾಡಿರುತ್ತಾರೆಂದು ಮಹಜರ್ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ನಾನು ಮಹಜರಿಗೆ ಸಹಿ ಮಾಡುವಾಗ ನನ್ನ ಜೊತೆ ಬೇರೆ ಯಾರು ಯಾರು ಇದ್ದರೆಂದು ನನಗೆ ಈಗ ನೆನಪಿಲ್ಲ. ಸಾಕ್ಷಿಯು ಪಂಚನಾಮೆಯಲ್ಲಿನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿಪಿ-*25* ಎಂದು, ಸಹಿಯನ್ನು ನಿಪಿ-*25*(ಎ) ಎಂದು ಗುರುತಿಸಲಾಯ್ತು. ಮಹಜರ್ ಕಾಲಕ್ಕೆ ತೆಗೆದ ಪೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ*26* ಎಂದು ಗುರುತಿಸಲಾಯ್ತು.

***(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀಸವಾಲು: ಸ.ಸ.ಅ. ರವರಿಂದ:**

ಪೋಲೀಸರು ನನ್ನ ಸಮಕ್ಷಮ ಆರೋಪಿಯ ಕೋರಿಕೆ ಸಹಿಯನ್ನು ಪಡೆದು ಮಹಜರ್ ಮಾಡಿರುತ್ತಾರೆಂದರೆ ಈಗ ನನಗೆ ನೆನಪಿಲ್ಲ. ನಾನು ಸಹಿ ಮಾಡುವ ಕಾಲಕ್ಕೆ ಚಾಸಾ-*24* ರವರು ಹಾಜರಿದ್ದರೆಂದರೆ ಸರಿ.

***<u>ಪಾಟೀ ಸವಾಲು ಃ ಆರೋಪಿ ಪರ</u>*** <u>ಶ್ರೀ ಎಂ ಕೆ ಟಿ</u> ***<u>ವಕೀಲರಿಂದ.</u>***

ಮಹಜರಿನಲ್ಲಿ ಬರೆದಿರುವ ವಿಷಯಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಸಾಕ್ಷಿ ಮುಂದುವರೆದು ಅದರಲ್ಲಿ ಬರೆದಿರುವ ವಿಚಾರವನ್ನು ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಜೊತೆ ಚಾಸಾ-*24* ರವರು ಸಹಿ ಮಾಡಿರುತ್ತಾರೆ. ಅವರು ಇಂಗ್ಲೀಷಿನಲ್ಲಿ ತಮ್ಮ ಸಹಿ ಮಾಡಿರುತ್ತಾರೆ. ನನಗೆ ಪ್ರಕರಣದ ಬಗ್ಗೆ ಏನು ತಿಳಿಯದೇ ಇದ್ದರೂ ಸಹ ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪೋಲೀಸರು ನಿನ್ನೆ ನನಗೆ ಮಹಜರಿನ ಸಂಗತಿಗಳನ್ನು ನನಗೆ ತಿಳಿಸಿರುತ್ತಾರೆ. ಮಹಜರಿನಲ್ಲಿ ಇರುವ ಚೆಕ್ಕುಬಂದಿ ಹೇಳಲಾಗುವುದಿಲ್ಲ. ನಿಪಿ*25* ಮಹಜರನ್ನು ಬಾವಿಕೆರೆಯ ಬ್ಯಾಂಕಿನಲ್ಲಿ ಬರೆದಿರುತ್ತಾರೆ. ನನಗೆ ಪ್ರಕರಣದ ಬಗ್ಗೆ ಏನು ತಿಳಿಯದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

***<u>ಮರು ವಿಚಾರಣೆ</u>ಃ ಇರುವುದಿಲ್ಲ.***

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***